# ಕ್ರೋಚೆಟ್: ಮಹಿಳೆಯರ ಹಾಟ್ ಫೇವರೆಟ್



ಕ್ರೋಚೆಟ್ ಉಡುಪುಗಳು, ಒಡವೆ, ಆ್ಯಕ್ಸೆಸರೀಸ್ ಫ್ಯಾಷನ್ ಲೋಕದಲ್ಲಿ ಟ್ರೆಂಡ್ ಸೃಷ್ಟಿಸಿವೆ. ಕೊಂಚ ಸೃಜನಶೀಲತೆ, ಚಾಕಚಕ್ಯತೆ ಇದ್ದರೆ ಮಹಿಳೆಯರು ಮನೆಯಲ್ಲೇ ಕ್ರೋಚೆಟ್ ಉಡುಪು, ಒಡವೆಗಳನ್ನು ತಯಾರಿಸಿ, ಧರಿಸಿಕೊಂಡು ಫ್ಯಾಷನ್ ಮೆರೆಯಬಹುದು.

■ ಕವಿತಾ ವಿನು ಭಟ್ಟ

ಫ್ಯಾಷನ್ ಲೋಕವೆಂದರೆ ನಿತ್ಯವೂ ಹೊಸತನದ ಹುಡುಕಾಟ. ದಿನಕ್ಕೊಂದು ಬಗೆಯ ಉಡುಪು, ಅದಕ್ಕೆ ಮ್ಯಾಚ್ ಆಗುವ ಒಡವೆ, ಬ್ಯಾಗ್, ಹೇರ್ ಸ್ಟೈಲ್ ಈಗಿನ ಟ್ರೆಂಡ್. ಹಾಗೇ ಶುರುವಾದ ದಾರದ ಆ್ಯಕ್ಸೆಸರೀಸ್ ವಿನ್ಯಾಸಕಾರರ ಸಹನೆ ಮತ್ತು ಸೃಜನಶೀಲತೆ ಸೂಚಿಸುತ್ತವೆ. ಸಿಲ್ಕ್ ಥ್ರೆಡ್ ಜ್ಯುವೆಲರಿ, ಸೀರೆಯ ಕುಚ್ಚು, ಕ್ರೋಚೆಟ್ ಒಡವೆ, ಉಲ್ಲನ್ ದಾರದ ಕರಕುಶಲಗಳು ಫ್ಯಾಷನ್ ಲೋಕವನ್ನು ಆಳುತ್ತಿವೆ.

ಫ್ಯಾಷನಬಲ್ ಆಗಿ ಕಾಣಬೇಕೆನಿಸುವ ಯುವತಿಯರು ಕ್ರೋಚೆಟ್ ಟಾಪ್‌ಗಳನ್ನು ಜೀನ್ಸ್ ಪ್ಯಾಂಟ್ ಮೇಲೆ ಹಾಕಿಕೊಂಡು ಖುಷಿಪಡುತ್ತಿದ್ದಾರೆ. ಕ್ರೋಚೆಟ್ ಶರ್ಟ್, ದುಪಟ್ಟಾ, ಸೀರೆ, ಟಾಪ್ ಎಲ್ಲವೂ ವಿವಿಧ ಬಣ್ಣಗಳಿಂದ ಕೂಡಿದ್ದು ಮಹಿಳೆಯರ ಹಾಟ್ ಫೇವರೆಟ್ ಎನಿಸಿವೆ. ಹೀಗಾಗಿ ಕ್ರೋಚೆಟ್ ಉಡುಪುಗಳು ಫ್ಯಾಷನ್ ಜಗತ್ತಿನಲ್ಲಿ ಭದ್ರ ಸ್ಥಾನವನ್ನೇ ಗಿಟ್ಟಿಸಿಕೊಂಡಿವೆ.

ಅನಾದಿ ಕಾಲದಿಂದಲೂ ರೇಷ್ಮೆ ಸೀರೆ ಮಹಿಳೆಯರ ಮೆಚ್ಚುಗೆ ಪಡೆದಿದೆ. ಭರ್ಜರಿ ರೇಷ್ಮೆ ಸೀರೆಯ ಜೊತೆಗೆ ಬೆಳ್ಳಿ, ಬಂಗಾರದ ಒಡವೆ ಧರಿಸಿದರೂ ಮ್ಯಾಚಿಂಗ್ ಮಾಡುವುದು ಬಲು ದುಬಾರಿ ಆಗುತ್ತದೆ. ಅದಕ್ಕಾಗಿಯೇ ಬಜೆಟ್ ಫ್ರೆಂಡ್ಲಿ ರೇಷ್ಮೆದಾರದ ಒಡವೆಗಳ ಆವಿಷ್ಕಾರ ಆಯಿತು. ರೇಷ್ಮೆ ದಾರಗಳನ್ನು ನೇಯ್ದು ತಯಾರಿಸಲಾದ ಕಿವಿಯೋಲೆಗಳು, ಬಳೆ, ನೆಕ್ಲೇಸ್, ಚೋಕರ್, ಕಾಲ್ಗೆಜ್ಜೆಗಳನ್ನು ಧರಿಸಿದ ಸೀರೆಗೆ ಮ್ಯಾಚಿಂಗ್ ಮಾಡಿಕೊಂಡು ಮೆರೆಯಬಹುದು.

ಕ್ರೋಚೆಟ್ ಒಡವೆಗಳನ್ನು ಮನೆಯಲ್ಲೇ ತಯಾರಿಸಬಹುದು. ಸೃಜನಶೀಲತೆ, ಚಾಕಚಕ್ಯತೆ ಇದ್ದರೆ ಮಹಿಳೆಯರು ಕ್ರೋಚೆಟ್ ಕಿವಿಯೋಲೆ, ಬಳೆ, ಬ್ರೇಸ್ಲೆಟ್ ಮುಂತಾದವುಗಳನ್ನು ತಯಾರಿಸಿ ಹಣವನ್ನೂ ಗಳಿಸಬಹುದು. ಆನ್‌ಲೈನ್‌ನಲ್ಲೂ ಕ್ರೋಚೆಟ್ ಉಡುಪು, ಒಡವೆಗಳು ಲಭ್ಯ.

## ಕ್ರೋಚೆಟ್ ಬಳಸುವುದು ಹೇಗೆ?

ಹಳೆಯದಾದ ಬಣ್ಣ ಮಾಸಿದ ಗಾಜಿನ ಬಳೆ ಅಥವಾ ಪ್ಲಾಸ್ಟಿಕ್ ಬಳೆಗಳಿಗೆ ಬಣ್ಣ ಬಣ್ಣದ ರೇಷ್ಮೆ ದಾರವನ್ನು ನೀಟಾಗಿ ಸುತ್ತಿ ತುದಿಯಲ್ಲಿ ಅಂಟಿಸಬೇಕು. ನಂತರ ಕುಂದನ್, ಬೀಡ್ಸ್ ಗಳಿಂದ ಅಲಂಕರಿಸಿ ತಯಾರಿಸಿದ ಸಿಲ್ಕ್ ಥ್ರೆಡ್ ಬಳೆಗಳು ಪಾರ್ಟಿ, ಫಂಕ್ಷನ್‌ಗಳಿಗೆ ರಿಚ್ ಲುಕ್ ಕೊಡುತ್ತವೆ. ಧರಿಸಿದ ಉಡುಪಿಗೆ ಹೊಂದುವಂತೇ ಕಲರ್ ಆಯ್ಕೆ ಮಾಡಬಹುದು. ಬಳೆಗಳ ಜೊತೆಗೆ ಬ್ರೇಸ್ಲೆಟ್, ಕೈಕಡಗ, ಉಂಗುರಗಳೂ ಮಾರುಕಟ್ಟೆಯಲ್ಲಿ ಕಡಿಮೆ ಬೆಲೆಯಲ್ಲಿ ದೊರೆಯುತ್ತವೆ. ಸಿಲ್ಕ್ ಥ್ರೆಡ್ ಚೋಕರ್, ನೆಕ್ಲೇಸ್‌ಗಳೂ ಸಹ ಕತ್ತಿನ ಅಂದ ಹೆಚ್ಚಿಸುತ್ತವೆ. ಬೀಡ್ಸ್‌ಗಳ ಸುತ್ತ ಸಿಲ್ಕ್